## 29. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತಿಕೋಟೆ, ಶಿಕಾರಿಪುರ ತಾ॥

ಸುಮಾರು 80 ವರ್ಷಗಳನ್ನು ಪೂರೈಸಿರುವ ಸ.ಹಿ.ಪ್ರಾ.ಶಾಲೆ ಮತ್ತಿಕೋಟೆ ಈ ಶಾಲೆಯು ಸುಂದರ ಅರೆ ಮಲೆನಾಡು ಪ್ರದೇಶದಲ್ಲಿದ್ದು, ಇಲ್ಲಿ ಸುಮಾರು 2000 ಕ್ಕಿಂತ ಹೆಚ್ಚು ಕುಟುಂಬಗಳು ವಾಸಮಾಡುತ್ತಿದ್ದಾರೆ. ಇಲ್ಲಿ ಆರ್ಥಿಕವಾಗಿ ಮುಂದುವರೆದಿರುವ ಹಾಗೂ ಆರ್ಥಿಕವಾಗಿ ಹಿಂದುಳಿದವರು ಇದ್ದಾರೆ, ಶಾಲೆಯು ಸರ್ಕಾರಿ ಜಾಗದಲ್ಲಿರುತ್ತದೆ, ಇಲ್ಲಿ ಅನೇಕ ಶಿಕ್ಷಕರು ತಮ್ಮ ಸೇವೆಯನ್ನು ಗೌರವದಿಂದ ವಿದ್ಯಾರ್ಥಿಗಳಿಗಾಗಿ ಯಾವುದೇ ಭೇದ ಭಾವವಿಲ್ಲದೇ ಜ್ಞಾನದ ದಾಹವನ್ನು ಧಾರೆ ಎರದಿದ್ದಾರೆ, ಹಾಗೆಯೇ ಇಲ್ಲಿ 9 ಕೊಠಡಿಗಳಿದ್ದು ಅವುಗಳಲ್ಲಿ 06 ಕೊಠಡಿಗಳು ಶಿಥಿಲಾವಸ್ಥೆಯಲ್ಲಿರುವುದರಿಂದ 2017–18ನೇ ಸಾಲಿನಲ್ಲಿ 1 ಕೊಠಡಿ 2018–19 ರಲ್ಲಿ 3 ಕೊಠಡಿಗಳು ಮಂಜೂರಾಗಿ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಈ ಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಹೋಗಿರುವುದು ಸಂತೋಷಕರವಾದ ವಿಷಯವಾಗಿದ್ದು, ಇವರಲ್ಲಿ ಅನೇಕರು ಉದ್ಯೋಗದಲ್ಲಿರುವುದು ಮಹತ್ತರವಾದ ವಿಷಯವಾಗಿದೆ, ಈ ಶಾಲೆಯು ಕೇವಲ ಪಠ್ಯಪುಸ್ತಕ ವಿಷಯಗಳಲ್ಲದೆ ಸಹಪಠ್ಯ ಚಟುವಟಿಕೆಗಳಲ್ಲಿಯೂ ತನ್ನದೇ ಆದ ಛಾಪು ಮೂಡಿಸಿದೆ. ಕೆಲವು ಸಂದರ್ಭಗಳಲ್ಲಿ ನಾವು ಶಾಲೆಯ ಪ್ರಗತಿಗಾಗಿ ಸಮಾಜವನ್ನು ಅವಲಂಭಿಸಬೇಕಾಗುತ್ತದೆ. ಸಮಾಜ ಮತ್ತು ಶಾಲೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಗ್ರಾಮದ ಜನರಿಗೆ ನಾವು ಪ್ರೀತಿಯ ಎರಡು ಮುಖಗಳಿದ್ದಂತೆ, ಪ್ರೀತಿಯ ನುಡಿಗಳನ್ನು ಆಡುವುದರ ಮೂಲಕ ಅನೇಕ ಜನರ ಮನಸ್ಸನ್ನು ಶಾಲೆಯತ್ತ ಗಮನ ಸೆಳೆದಿರುವುದು ಹೆಮ್ಮೆಯ ಸಂಗತಿಯಾಗಿದೆ, ಹಾಗೆಯೇ ಇಲ್ಲಿ ಅನೇಕ ಶಿಕ್ಷಕರು ಬಂದು ಈ ಶಾಲೆಯ ಅಭಿವೃದ್ಧಿಗೆ ಶ್ರಮಿಸಿರುತ್ತಾರೆ, ಹಾಗೆಯೇ ಶಾಲೆಯ ಅಭಿವೃದ್ಧಿಗಾಗಿ ಶಿವಪ್ಪ ಹೆಚ್ ಇದೇ ಶಾಲೆಯಲ್ಲಿ ಓದಿ ಶಿಕ್ಷಕ ವೃತ್ತಿಯಲ್ಲಿದ್ದು ಇದೇ ಶಾಲೆಯಲ್ಲಿ ಬಡ್ತಿ ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಶ್ರೀ ನಾಗರಾಜ, ಸಿದ್ದಲಿಂಗಪ್ಪ ಎನ್, ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಚಂದ್ರಪ್ಪ ಎಂ, ನಾಗರಾಜಪ್ಪ ಎಂ, ಶ್ರೀ ಉಮೇಶ ಹಾಗೂ ಪರಮೇಶ ನಾಯ್ಕ ಇವರಿಂದ ಕೂಡಿದ ನಮ್ಮ ಶಿಕ್ಷಕ ವೃಂದ ವಿದ್ಯಾರ್ಥಿಗಳಾಗಿ ಶಿಕ್ಷಣದಲ್ಲಾಗಲೀ ಆಟೋಟಗಳಲ್ಲಾಗಲಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಾಗಲಿ ಹಾಗೂ ಶಾಲೆಯ ನಿರ್ವಹಣೆಯಲ್ಲೇ ಆಗಲಿ, ಖಾಸಗಿ ಶಾಲೆಗಿಂತಲೂ ಸರ್ಕಾರಿ ಶಾಲೆ ಉತ್ತಮ ಎನ್ನುವ ರೀತಿಯಲ್ಲಿ ಅತ್ಯಂತ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿಕೊಂಡು ಬರುತ್ತಿದ್ದಾರೆ,

ಶಾಲಾ ಆವರಣದಲ್ಲಿ ತೆಂಗಿನ ಸಸಿಗಳನ್ನು ನೆಟ್ಟು ಪೋಷಿಸುತ್ತಿದ್ದೇವೆ, ತಾಲ್ಲೂಕಿನ ಸಮನ್ವಯಾಧಿಕಾರಿಗಳ ಸಲಹೆಯಂತೆ ಹಳೆಯ ವಿದ್ಯಾರ್ಥಿಗಳಿಂದ ದೇಣಿಗೆಯನ್ನು ಸಂಗ್ರಹಿಸಿ ಸ್ಮಾಟ್‌ಕ್ಲಾಸ್ ಮಾಡಿರುತ್ತೇವೆ, ಹೊಸ ಕಟ್ಟಡದ ಗೋಡೆಯ ಮೇಲೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುವಂತೆ ಚಿತ್ರಗಳನ್ನು ಬಿಡಿಸಿರುತ್ತಾರೆ,



## ಶಾಲಾ ಆವರಣ




ವಿನೂತನವಾಗಿ ಸಿದ್ಧ ಪಡಿಸಿದ ಕಟ್ಟಡದ ವೈವಿಧ್ಯಮಯವಾದ ನವೀಕರಣ




ವಿನೂತನವಾಗಿ ಸಿದ್ಧ ಪಡಿಸಿದ ಕಟ್ಟಡದ ವೈವಿಧ್ಯಮಯವಾದ ನವೀಕರಣ



### ವಿನೂತನವಾದ ಸ್ಮಾರ್ಟ್‌ಕ್ಲಾಸ್

ಈ ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಮುಖ್ಯ ಶಿಕ್ಷಕರ ಸ್ನೇಹಿತರಿಂದ ಧನಸಹಾಯ ಪಡೆದು ಸ್ಮಾರ್ಟ್ ಕ್ಲಾಸ್ ಮಾಡಲಾಯಿತು.




